# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(1ಬಿ)ಪಿಆರ್/36/2019-20

ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು. ದಿನಾಂಕ: 25/9/19

## ಕಛೇರಿ ಆದೇಶ

ವಿಷಯ: ಬಿಬಿಎಂಪಿ 8 ವಲಯಗಳ ಉಸ್ತುವಾರಿಯನ್ನು ವಿಶೇಷ ಆಯುಕ್ತರು ಮತ್ತು ಅಪರ ಆಯುಕ್ತರಿಗೆ ವಹಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ: ನಅಇ 112 ಎಂಎಸ್‌ಯು 2019, ದಿನಾಂಕ: 16-09-2019.
2) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 112 ಎಂಎಸ್‌ವೈ 2019, ದಿನಾಂಕ: 16-09-2019.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆ.ಎಂ.ಸಿ. ಕಾಯ್ದೆಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಬಿಬಿಎಂಪಿಯ ಆಯುಕ್ತರ ಕಾರ್ಯದ ಹೊರೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಬಿಬಿಎಂಪಿಯ 8 ವಲಯಗಳನ್ನು ಆಯುಕ್ತರ ಕಾರ್ಯಪರಿಧಿಯಿಂದ ಬಿಡುಗಡೆಗೊಳಿಸಿ ಬಿಬಿಎಂಪಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು 4 ವಿಶೇಷ ಆಯುಕ್ತರು ಮತ್ತು ಅಪರ ಆಯುಕ್ತರಿಗೆ ತಲಾ 2 ವಲಯಗಳಂತೆ ಉಲ್ಲೇಖ-(1)ರಂತೆ ನೀಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬಿಬಿಎಂಪಿಯ 8 ವಲಯಗಳ ಉಸ್ತುವಾರಿಯನ್ನು ಉಲ್ಲೇಖ-(2)ರ ಅಧಿಸೂಚನೆಯಲ್ಲಿ ವಿಶೇಷ ಆಯುಕ್ತರು ಮತ್ತು ಅಪರ ಆಯುಕ್ತರಿಗೆ ನೀಡಲಾಗಿರುವುದನ್ನು ಪರಿಗಣಿಸಿ, ಈ ಕೆಳಕಂಡ ಅಧಿಕಾರಿಗಳಿಗೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ವಲಯಗಳ ಉಸ್ತುವಾರಿಯನ್ನು ನೀಡಲಾಗಿದೆ.

| ಕ್ರ.ಸಂ. | ಅಧಿಕಾರಿಯ ಹೆಸರು ಮತ್ತು ಪದನಾಮ | ಉಸ್ತುವಾರಿ ನೀಡಲಾಗಿರುವ ವಲಯಗಳು |
|---|---|---|
| 1. | ಶ್ರೀ ರವಿಕುಮಾರ್ ಸುರಪೂರ, ಭಾ.ಆ.ಸೇ., ವಿಶೇಷ ಆಯುಕ್ತರು (ಯೋಜನೆ) | ಪೂರ್ವ ಮತ್ತು ಯಲಹಂಕ |
| 2. | ಶ್ರೀ ಎಂ. ಲೋಕೇಶ್, ಭಾ.ಆ.ಸೇ., ವಿಶೇಷ ಆಯುಕ್ತರು (ಹಣಕಾಸು ಮತ್ತು ಮಾಹಿತಿ ತಂತ್ರಜ್ಞಾನ) | ದಕ್ಷಿಣ ಮತ್ತು ರಾಜರಾಜೇಶ್ವರಿನಗರ |
| 3. | ಶ್ರೀ ವಿ. ಅನ್ಬುಕುಮಾರ್, ಭಾ.ಆ.ಸೇ., ವಿಶೇಷ ಆಯುಕ್ತರು (ಆಡಳಿತ) | ಪಶ್ಚಿಮ ಮತ್ತು ದಾಸರಹಳ್ಳಿ |
| 4. | ಶ್ರೀ ಡಿ. ರಂದೀಪ್, ಭಾ.ಆ.ಸೇ., ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) | ಮಹದೇವಪುರ ಮತ್ತು ಬೊಮ್ಮನಹಳ್ಳಿ |

ವಲಯ ಉಸ್ತುವಾರಿ ವಿಶೇಷ ಆಯುಕ್ತರು ಮತ್ತು ಅಪರ ಆಯುಕ್ತರುಗಳಿಗೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ: ನಅಇ 112 ಎಂಎನ್‌ಯು 2019, ದಿನಾಂಕ: 16-09-2019ರ ಆದೇಶದಲ್ಲಿ ಈ ಕೆಳಕಂಡಂತೆ ಅಧಿಕಾರಿಗಳನ್ನು ಹಂಚಿಕೆ ಮಾಡಿ ಆದೇಶಿಸಿದೆ.

**ವಲಯ ಉಸ್ತುವಾರಿ ವಿಶೇಷ ಆಯುಕ್ತರು ಬಿಬಿಎಂಪಿ**

1. ಈಗಾಗಲೇ ಪ್ರತ್ಯಾಯೋಜಿಸಲ್ಪಟ್ಟಿರುವ ಅಧಿಕಾರಗಳು
2. ಉಸ್ತುವಾರಿ ವಹಿಸಿರುವ 2 ವಲಯಗಳಿಗೆ ಸೀಮಿತವಾಗಿರುವ ಎಲ್ಲ ವಿಷಯಗಳ ಕುರಿತು ಕಾಯ್ದೆಯಡಿ ಆಯುಕ್ತರಿಗೆ ಇರುವ ಅಧಿಕಾರ ಚಲಾಯಿಸಲು ಸಂಪೂರ್ಣ ಅಧಿಕಾರ.
3. ಉಸ್ತುವಾರಿ ವಹಿಸಿರುವ 2 ವಲಯಗಳಿಗೆ ಸೀಮಿತವಾಗಿ ವಲಯ ಕಾಮಗಾರಿ, ಘನತ್ಯಾಜ್ಯ ನಿರ್ವಹಣೆ, ತೋಟಗಾರಿಕೆ, ವಿದ್ಯುತ್, ವಲಯ ಯೋಜನೆ, ಗೃಹ ನಿರ್ಮಾಣ, ವಲಯ ನಗರ ಯೋಜನೆ, ಆಸ್ತಿಗಳ ನಿರ್ವಹಣೆ, ಕಲ್ಯಾಣ, ಶಿಕ್ಷಣ, ಅರಣ್ಯ ಆರೋಗ್ಯ ಇತ್ಯಾದಿ ವಿಷಯಗಳ ಕುರಿತು ಆಯುಕ್ತರಿಗೆ ಇದ್ದ ಸಂಪೂರ್ಣ ಆರ್ಥಿಕ ಅಧಿಕಾರವನ್ನು ವಹಿಸಿದೆ.
4. ಉಸ್ತುವಾರಿ ವಹಿಸಿರುವ 2 ವಲಯಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹ ಸೇರಿದಂತೆ ಕಂದಾಯ, ಜಾಹೀರಾತು ಇತ್ಯಾದಿ ಮೂಲಗಳಿಂದ ಪಾಲಿಕೆಯ ಆದಾಯ ಕ್ರೋಢೀಕರಣದ ಜವಾಬ್ದಾರಿ.

ಮೇಲ್ಕಂಡಂತೆ ಈಗಾಗಲೇ ವಿವರವಾದ ಇಲಾಖಾವಾರು ಅಧಿಕಾರ ಪ್ರತ್ಯಾಯೋಜನೆ ನಡವಳಿ ಸಂಖ್ಯೆ: ಬಿ12(1)ಪಿಆರ್/394/2019-20 ದಿನಾಂಕ: 25-09-2019ರಂದು ತಾತ್ಕಾಲಿಕವಾಗಿ ಹೊರಡಿಸಲಾಗಿದೆ.

ಈ ಮೇಲಿನ ಪ್ರತ್ಯಾಯೋಜನೆ ಕುರಿತು, ಒಂದು ತಿಂಗಳು ಕಾರ್ಯನಿರ್ವಹಿಸಿದ ನಂತರ ಯಾವುದಾರು ಬದಲಾವಣೆ, ತಿದ್ದುಪಡಿ ಮತ್ತು ಸುಧಾರಣೆ ಅವಶ್ಯಕತೆ ಕಂಡುಬಂದಲ್ಲಿ ಈ ಬಗ್ಗೆ ವಿವರವಾದ ಆದೇಶವನ್ನು ಹೊರಡಿಸಲಾಗುವುದು.

(ಸಹಿ) 25/9/2019
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
: ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
: ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಯೋಜನೆ / ಹಣಕಾಸು ಮತ್ತು ಮಾಹಿತಿ ತಂತ್ರಜ್ಞಾನ) / ಅಪರ ಆಯುಕ್ತರು (ಆಡಳಿತ / ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರಿಗೆ ಹಾಗೂ ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.
: ಸರ್ಕಾರದ ಅಧೀನ ಕಾರ್ಯದರ್ಶಿಯವರು, ಸಿಆಸು ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
: ಸರ್ಕಾರದ ಅಧೀನ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
: ಸರ್ಕಾರದ ಅಧೀನ ಕಾರ್ಯದರ್ಶಿಯವರು, ಆರ್ಥಿಕ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
: ಎಲ್ಲಾ ವಲಯಗಳ ಅಪರ / ಜಂಟಿ ಆಯುಕ್ತರುಗಳಿಗೆ ಕಳುಹಿಸಿದೆ.
: ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಕಳುಹಿಸಿದೆ.
: ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸಿದೆ.
: ಮಾಹಿತಿ ಮತ್ತು ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಪಾಲಿಕೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
: ಕಛೇರಿ ಪ್ರತಿ.